## ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

## ಅಸಲು ದಾವೆ 84/2021

ಡಿಡಬ್ಲೂಃ 2

| | |
|---|---|
| ಸಾಕ್ಷಿಯ ಹೆಸರು | ಸಿ ಪುಟ್ಟರಾಜು |
| ತಂದೆ ಹೆಸರು | ವೈ ಚಲುವೇಗೌಡ |
| ವಯಸ್ಸು | 72 ವರ್ಷ |
| ಉದ್ಯೋಗ | ವಕೀಲರು ಮತ್ತು ನೋಟರಿ, ಪಾಂಡವಪುರ |
| ವಾಸ | ಶ್ರೀರಂಗಪಟ್ಟಣ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 24.04.2026

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು 1998 ರಿಂದ ನೋಟರಿ ಮತ್ತು ವಕೀಲರಾಗಿ ಪಾಂಡವಪುರ ತಾಲ್ಲೂಕಿನಲ್ಲಿ ಕೆಲಸ ಮಾಡಿಕೊಂಡು ಬರುತ್ತಿದ್ದೇನೆ. ದಿಃ 22.07.2019 ರಂದು ಸುಂಕಾತೊಣ್ಣೂರು ಗ್ರಾಮದ ಎಸ್ ಪಿ ಶಿವಣ್ಣೇಗೌಡ ಮತ್ತು ಮತ್ತು ಅವರ ಇಬ್ಬರು ಮಕ್ಕಳಾದ ಕಾಳೇಗೌಡ ಮತ್ತು ಕೃಷ್ಣ ಎಸ್ ಎಂಬುವವರು ದಾಖಲೆ ಬರೆದ ಪತ್ರಗಾರರೊಂದಿಗೆ ನನ್ನ ಕಚೇರಿಗೆ ಬಂದಿದ್ದರು. ನಾನು ಆ ಪಾಲುಪಟ್ಟಿಯನ್ನು ಪರಿಶೀಲಿಸಿ ನೋಟರಿ ಮಾಡಿರುತ್ತೇನೆ, ಹಾಗೆ ಅವರಿಗೆ ಈ ಪಂಚಾಯಿತಿ ಪಾಲುಪಟ್ಟಿ ಮೂಲಕ ನೀವು ಕಾನುನಾನುಬದ್ಧ ದಾಖಲೆ ನಿರ್ವಹಿಸಬೇಕಾಗುತ್ತದೆ ಎಂದು ತಿಳಿಸಿರುತ್ತೇನೆ. ಆದರೆ ಅವರು ಸದರಿ ದಾಖಲೆಯನ್ನು ಈಗ ಮಾಡಿರುವಂತೆ ಸರ್ವೆ ಸ್ಕೆಚ್ ಮಾಡಿಸಿ ನಂತರ ನೊಂದಣಿ ಮಾಡಿಸಿಕೊಳ್ಳುವುದಾಗಿ

*ನನ್ನ ಬಳಿ ಹೇಳಿದರು. ಅದರಂತೆ 3 ಜನರು ಬೆರಳಚ್ಚು ಮಾಡಿದ್ದ ದಾಖಲೆ ಮೇಲೆ ಸಹಿ ಮಾಡಿದರು. ನನ್ನ ಕೆಲಸದ ಒತ್ತಡದಿಂದಾಗಿ ಆ ದಾಖಲೆಯನ್ನು ನನ್ನ ನೋಟರಿ ರಿಜಿಸ್ಟರಿನಲ್ಲಿ ನೊಂದಣಿ ಮಾಡಿಕೊಂಡಿಲ್ಲ. ನಾನು ಆ ದಾಖಲೆಗೆ ನೋಟರಿ ಮಾಡಿಕೊಟ್ಟೆನು. ಆ ದಾಖಲೆಯಲ್ಲಿರುವ ಸಹಿ ಮತ್ತು ಮೊಹರು ನನ್ನವು. ಸದರಿ ದಾಖಲೆಯನ್ನು ಈಗಾಗಲೇ ನಿಡಿ.1 ಎಂದು ಗುರುತಿಸಲಾಗಿದ್ದು, ಸಾಕ್ಷೀದಾರರ ಸಹಿಯನ್ನು ನಿಡಿ.1 ಇ ಎಂದು ಗುರುತಿಸಲಾಯಿತು. ಉಭಯಪಕ್ಷಗಾರರು ನನ್ನ ಸಮಕ್ಷಮ ನಿಡಿ.1 ಕ್ಕೆ ಸಹಿ ಮಾಡಿರುತ್ತಾರೆ. ಪತ್ರ ಬರಹಾಗಾರರು ಪಕ್ಷಗಾರರನ್ನು ನನಗೆ ಪರಿಚಯಿಸಿದರು ಹಾಗೂ ಅವರು ಸಹ ನನ್ನ ಸಮಕ್ಷಮ ನಿಡಿ. 1 ಕ್ಕೆ ಸಹಿ ಮಾಡಿರುತ್ತಾರೆ.*

***ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ***

*2. ನೋಟರಿ ಕಾಯಿದೆ ಪ್ರಕಾರ ನೀವು ಒಂದುದ ರಿಜಿಸ್ಟರನ್ನು ನಿರ್ವಹಣೆ ಮಾಡಬೇಕೆಂದರೆ ಸರಿ. ದಾಖಲೆಗಳನ್ನು ದೃಢೀಕರಿಸುವಾಗ ನೀವು ಆ ರಿಜಿಸ್ಟರಿನಲ್ಲಿ ದಿನಾಂಕ, ಸಂಖ್ಯೆ ನೋಂದಣಿ ಮಾಡಿಕೊಳ್ಳಬೇಕೆಂದರೆ ಸರಿ. ನೊಂದಣಿ ಮಾಡಿಕೊಳ್ಳುವಾಗ ದಾಖಲೆಗೆ ಒಂದು ಸಂಖ್ಯೆ ಕೊಡುತ್ತೀರಾ ಎಂದರೆ ಸರಿ. ನಿಡಿ.1 ರಲ್ಲಿ ದಾಖಲೆ ಸಂಖ್ಯೆ ನಮೂದಿಲ್ಲ ಎಂದರೆ ಸರಿ. ನೀವು ಪಾಲುಪಟ್ಟಿಯನ್ನು ನೊಂದಣಿ ಮಾಡಿಕೊಳ್ಳಲು ಸಕ್ಷಮ ಪ್ರಾಧಿಕಾರ ಅಲ್ಲ ಎಂದರೆ ಸರಿ ಸಾಕ್ಷಿ ಸ್ವತಃ ನಾನು ದೃಢೀಕರಿಸಿರುತ್ತೇನೆಂದು ಹೇಳುತ್ತಾರೆ. ನಿಡಿ.1 ರಲ್ಲಿ ಸಾಕ್ಷೀದಾರರುಗಳ ಪೂರ್ಣ ವಿವರಗಳು ಇಲ್ಲ ಎಂದರೆ ಸರಿ. ನಿಡಿ.1 ರಲ್ಲಿ ಪತ್ರ ಬರಹಗಾರರ*

ಪೂರ್ಣ ವಿಳಾಸ ಇಲ್ಲ ಎಂದರೆ ಸಾಕ್ಷಿ ವಿಳಾಸ ಇದೆ ಆದರೆ ಪೂರ್ಣವಾಗಿ ಕಾಣಿಸುತ್ತಿಲ್ಲವೆಂದು ಹೇಳುತ್ತಾರೆ, ಶ್ರೀನಿವಾಸ ಎಂಬುವವರು ಕೆನ್ನಾಲುಕಡೆಯವರು ಎಂದು ನನಗೆ ಗೊತ್ತು. ನಿಡಿ.1 ರಲ್ಲಿ ಪತ್ರ ಬರಹಗಾರರು ಕೆನ್ನಾಲು ಅಥವಾ ಪಾಂಡವಪುರ ಎಂದು ಬರೆದಿಲ್ಲ ಎಂದರೆ ಸಾಕ್ಷಿ ಪಾಂಡವಪುರ ಎಂದು ಕಾಣುತ್ತಿದೆ ಎಂದು ಹೇಳುತ್ತಾರೆ. ಪಕ್ಷಗಾರರ ಸಹಿಗಳನ್ನು ನನ್ನ ರಿಜಿಸ್ಟರಿನಲ್ಲಿ ತೆಗೆದುಕೊಂಡಿಲ್ಲ. ನೀಮ್ಮ ಕಚೇರಿಗೆ ಆ ದಿನ ಬಂದಿದ್ದ ವ್ಯಕ್ತಿಗಳನ್ನು ಈಗ ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿ ಆರು ವರ್ಷವಾಗಿರುವುದರಿಂದ ಗುರುತಿಸಲಾಗುವುದಿಲ್ಲ ಎಂದು ಹೇಳುತ್ತಾರೆ. ನಿಡಿ.1 ರಲ್ಲಿ ನೀವು ಸಲಹೆ ನೀಡಿರುವಂತೆ ಕಾನೂನು ಮಾನ್ಯತೆ ಇರುವ ದಾಖಲೆ ಮಾಡಿಕೊಳ್ಳಿ ಎಂದು ಷರ ಬರೆದಿಲ್ಲ ಎಂದರೆ ಸರಿ.

3. ನಿಡಿ.1 ರ ಮೇಲಿರುವ ಸಹಿ ವಾದಿಯದ್ದು ಅಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಆ ಕಾಳೇಗೌಡ ಎನ್ನುವ ಸಹಿ ಯಾರು ಮಾಡಿದ್ದಾರೆಂದು ನಿಮಗೆ ಗೊತ್ತಿಲ್ಲದೆ ಇರುವುದರಿಂದ ನೀವು ನಿಮ್ಮ ರಿಜಿಸ್ಟರಿನಲ್ಲಿ ದಾಖಲೆಯನ್ನು ನಮೂದು ಮಾಡಿಕೊಂಡಿಲ್ಲ ಹಾಗೂ ಈಗ ಗುರುತಿಸಲಾಗುವುದಿಲ್ಲ ಎಂದು ಹೇಳುತ್ತೀರುತ್ತೀರಾ ಎಂದರೆ ಸರಿಯಲ್ಲ. ನೀವು, ಸಾಕ್ಷೀದಾರರು, ಪತ್ರಬರಹಗಾರರು, ಪ್ರತಿವಾದಿ, ಪರಸ್ಪರ ಎಲ್ಲರು ಷಾಮೀಲಾಗಿ ಈ ದಾಖಲೆಯನ್ನು ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ. ನಿಡಿ.1 ರಲ್ಲಿರುವ ಕಾಳೇಗೌಡ ಎನ್ನುವ 4 ಸಹಿಗಳು ನಕಲಿ ಸಹಿಗಳು ಎಂದರೆ ಸರಿಯಲ್ಲ.

*ಪ್ರತಿವಾದಿಯ ಚಿತಾವಣೆ ಮೇರೆಗೆ ನಿಡಿ.1 ನ್ನು ಸೃಷ್ಟಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ.ಪಾಂಡವಪುರ.***